

ರೋಕಿಯ ಬೊಗಳುವಿಕೆಗೆ ಕೆತ್ತನೆ ಮಂಚದ ಮೊಳದೆತ್ತರ ಹಾಸಿಗೆಯಲ್ಲಿ ಅತ್ತಿತ್ತ ಹೊರಳಾಡುತ್ತಿದ್ದ ಅಕ್ಕು ಪೂಜಾರ್ತಿ ಕಣ್ಣ ತೆರೆದು ಕಿಟಿಕಿಯಾಚೆ ದೃಷ್ಟಿ ಚೆಲ್ಲಿದಳು. ನೋಡುವಾಗ ಆಚೆಮನೆಯ ಕೊಗ್ಗು ಬೆಲ್ಚಾಡನ ಕೆಮ್ಮೈಯ್ರೆ ಮಾಲಿನಿಯ ಅಂತೂರಿಯಂನ ಬುಡವನ್ನು ಒಕ್ಕುತ್ತಿತ್ತು. ‘ಇವನನ್ನು ಹಾಗೆ ಬಿಟ್ಟರೆ ಇನ್ನು ಇಡೀ ಅಂಗಳದಲ್ಲಿ ತೂರಿ ಹಾಕಿಯಾನು. ಹೇಗೂ ಮಲಗಿ ಪ್ರಯೋಜನವಿಲ್ಲ, ಇನ್ನು ಏಳುವುದೇ ಸರಿ’ ಎನ್ನಿಸಿ ಮಂಚದಲ್ಲಿ ಎದ್ದು ಕುಳಿತು ಕೊಳ್ಳುವಷ್ಟರಲ್ಲೇ ಕೆಲಸದ ಸುಮ ಕೆಮ್ಮೈಯ್ರೆಯ ಬೆನ್ನಿಗೆ ಕಲ್ಲು ಹೊಡೆದಾಗಿತ್ತು. “ಭಾಷೆಯಿಲ್ಲದ ಕೋಳಿ. ಎಷ್ಟು ಸಿಕ್ಕಿದರೂ ಗೊತ್ತಾಗುವುದಿಲ್ಲ.” ‘ಪುರ್’ ಎಂದು ದರೆ ಹತ್ತಿ ನಿರ್ಲಕ್ಷ್ಯವಾಗಿ ಭುಜ ಎತ್ತರಿಸಿದವನ ಬೆನ್ನಿಗೆ ಇನ್ನೊಂದು ಕಲ್ಲೆತ್ತಿ ಬಿಸಾಡಿದವಳ ಸಿಟ್ಟಿನ ಕಾವು ಅಕ್ಕು ಪೂಜಾರ್ತಿಗೆ ನಗೆಯುಕ್ಕಿಸಿತು. “ಎಂತದೆ... ಭಾಷೆ ಇರಲು ಅದೇನು ಮನುಷ್ಯನೇ?... ಈಗಿನ ಕಾಲದಲ್ಲಿ ಮನುಷ್ಯನಿಗೇ ಭಾಷೆ ಇಲ್ಲ ಮಾರಾಯ್ತಿ” ಇವಳ ಸ್ವರ ಕೇಳಿದ ಸುಮ ಕಿಟಿಕಿಯ ಹತ್ತಿರ ಬಂದಳು. “ಅಮ್ಮನದು ನಿದ್ದೆ ಆಯ್ತಾ?... ನಾನು ಮನೆಗೆ ಹೊರಟದ್ದು... ಹಾಗಾದ್ರೆ ಬಾಗಿಲು ಹಾಕುವುದು ಬೇಡವಾ?” “ಬೇಡವೇ... ನಾನು ಎದ್ದೆ” ಅಕ್ಕು ಪೂಜಾರ್ತಿ ಮಂಚದಿಂದ ಎದ್ದಳು. ಮೈಯ್ಯೆಲ್ಲಾ ಭಾರ ಭಾರ... ಏನೋ ಆಲಸ್ಯ... ಮಧ್ಯಾಹ್ನ ಆಸೆಯಿಂದ ತಿಂದ ಹಲಸಿನ ಪಲ್ಯ ಎದೆಯಲ್ಲಿ ಒತ್ತುತ್ತಾ ಇದೆ. ನಿದ್ದೆ ಬರುವುದಿರಲಿ... ಮಲಗಲಿಕ್ಕೂ ಆಗುವುದಿಲ್ಲ. ಕರ್ಮ!... ಮೂರು ಹೊತ್ತೂ ಹಲಸು ತಿಂದು ಹರಕು ಚಾಪೆಯಲ್ಲಿ ಪರಕಟ್ಟೆ ಸೀರೆ ಬಿಡಿಸಿ ಮಲಗಿದಾಕ್ಷಣವೇ ನಿದ್ದೆಗೆ ಶರಣಾಗುತ್ತಿದ್ದ ಆ ಹಳೆಯ ದಿನಗಳು ಎಲ್ಲೋ ಕನಸಿನಲ್ಲಿ ಅನ್ನಿಸುತ್ತಿತ್ತು ಅಕ್ಕು ಪೂಜಾರ್ತಿಗೆ! ಮಳೆಗಾಲದ ಆರಂಭದಲ್ಲಿ ಏಣೆಲ್ ಬಿತ್ತನೆ ಮುಗಿದ ಕೂಡಲೇ ಗೋಪಣ್ಣ ಶೆಟ್ರು ಬೊಂಬಾಯಿಗೆ ಅಂಗಡಿಯ ಜವುಳಿ ಖರೀದಿಗೆ ಹೋಗುವ ಸಮಯದಲ್ಲಿ ಕೆಲವೊಮ್ಮೆ ಅಂತಕ್ಕ ಶೆಡ್ತಿಗೆ ಬೇಸರ ಆಗುತ್ತದೆಂದು ರಾತ್ರಿ ಅವರ ಮನೆಗೆ ಮಲಗಲು ಹೋಗುವುದಿತ್ತು. ಊಟದ ನಂತರ ಅಂತಕ್ಕ ಶೆಡ್ತಿಯ ಮಂಚದ ಕೆಳಗೆ ಮಲಗುವವಳು ಅಂತಕ್ಕನ ಮಾತಿಗೆ ಎರಡು ಬಾರಿ ಹೂಂಗುಟ್ಟಿ ಮೂರನೆಯ ಮಾತಿಗೆ ನಿದ್ದೆಗಣ್ಣಾಗುತ್ತಿದ್ದಳು. ಇವಳ ಹೂಂಗುಟ್ಟುವಿಕೆ ಕೇಳದಾದಾಗ ಅಂತಕ್ಕ ಶೆಡ್ತಿ ಮಾತು ನಿಲ್ಲಿಸಿ ಮನಸ್ಸು ಕೊಟ್ಟರೆ ಮಾರಾಯ್ತಿಯ ಗೊರಕೆ ಕೇಳಿ ಬರುತ್ತಿತ್ತು. ಬೆಳಗ್ಗೆ ಎದ್ದಾಗ ಅಂತಕ್ಕ ನೆಗೆಯಾಡುತ್ತಿದ್ದರು. “ಎಂತ ಕುಂಭಕರ್ಣನ ನಿದ್ದೆಯೇ ಮಾರಾಯ್ತಿ?... ಈ ಲೆಕ್ಕದಲ್ಲಿ ಕುದ್ಕ ಬಂದು ನನ್ನನ್ನು ಹೊತ್ತುಕೊಂಡೋದ್ರೂ ಗೊತ್ತಾಗ್ಲಿಕ್ಕಿಲ್ಲ ಅಲ್ಲನೆ ನಿಂಗೆ...” “ಮತ್ತೆ ಮನುಷ್ಯ ಮಲಗುದು ಎಂತಕ್ಕೆ ಶೆಡ್ತಿಯರೇ... ನಿದ್ದೆ ಮಾಡ್ಲಿಕ್ಕೆ ಅಲ್ವಾ?” “ಅದ್ರೂ ಚಾಪೆಗೆ ತಲೆ ಕೊಡುವ ಮೊದಲೇ ಎಂತ ನಿದ್ದೆಯೇ... ನಂಗೂ